# CCA ROUND -2 @ SRS HERITAGE SCHOOL

ಪ್ರಜಾ ಪ್ರಗತಿ

## ಎಸ್.ಆರ್.ಎಸ್ ಎರಡನೇ ಹಂತದ ಸಹಪಠ್ಯೇತರ ಚಟುವಟಿಕೆ



**ಚಿತ್ರದುರ್ಗ:** ಇಲ್ಲಿನ ಎಸ್.ಆರ್.ಎಸ್ ಹೆರಿಟೇಜ್ ಶಾಲೆಯಲ್ಲಿ ಎರಡನೇ ಹಂತದ ಸಹಪಠ್ಯೇತರ ಚಟುವಟಿಕಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು

1 ರಿಂದ 10ನೇ ತರಗತಿಗಳಿಗೆ ವಿವಿಧರೀತಿಯ ಚಟುವಟಿಕೆಗಳನ್ನು ಆಯೋಜಿಸುವುದರೊಂದಿಗೆ ಮಕ್ಕಳಪ್ರತಿಭೆಯನ್ನು ಹೊರತೆಗೆಯುವ ಒಂದ ುಶಾಲಾ ಪ್ರಕ್ರಿಯೆಯಾಗಿತ್ತು.

ಛದ್ಮವೇಷ (ಫ್ಯಾನ್ಸಿಡ್ರೆಸ್), ಡಾಲ್ ಮೇಕಿಂಗ್, ಫ್ಲವರ್ ಡೆಕೊರೇಷನ್, ಇಂಗ್ಲೀಷ್ ಪದ್ಯಗಳ ಕಂಠಪಾಠ, ಕ್ಲೇ ಮಾಡ್ಲಿಂಗ್ ಇನ್ನಿತರೆ ಚಟುವಟಿಕೆಗಳನ್ನು ನಡೆಸಲಾಯಿತು

ಈ ಚಟುವಟಿಕೆಯು ಸ್ಪರ್ಧಾತ್ಮಕವಾಗಿತ್ತು. ವಿದ್ಯಾರ್ಥಿಗಳು ತೀರ್ಪುಗಾರರ ಮೆಚ್ಚುಗೆ ಗಳಿಸಿದರು. ಶಾಲೆಯಲ್ಲಿಇತರೆಚಟುವಟಿಕಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಪಠ್ಯೇತರಚಟುವಟಿಕಾಕಾರ್ಯಕ್ರಮಕ್ಕೆ ವಿಶೇಷವಾಗಿ ತೀರ್ಪುಗಾರರು ಮಕ್ಕಳ ಸೃಜನಾತ್ಮಕ ಮತ್ತುಕ್ರಿಯಾತ್ಮಕಕಲೆಯನ್ನು ಗುರುತಿಸಿ ವಿದ್ಯಾರ್ಥಿಗಳಿಗೆ ತೀರ್ಪನ್ನು ನೀಡಿದ್ದಾರೆ.ಎರಡನೇ ಹಂತದ ಪಠ್ಯೇತರ ಚಟುವಟಿಕೆಗಳಲ್ಲಿ ಸ್ಪರ್ಧಿಸಿದ ಎಲ್ಲಾ ವಿದ್ಯಾರ್ಥಿಗಳ ಸೃಜನಾತ್ಮಕಕಲೆಯನ್ನುತೀರ್ಪುಗಾರರುಶ್ಲಾಘಿಸಿದರು.

ಶಾಲೆಯ ಪ್ರಾಂಶುಪಾಲರಾದ ಶ್ರೀಯುತ ಪ್ರಭಾಕರ್ ಎಂ ಎಸ್. ಮಾತನಾಡಿ ವಿದ್ಯಾರ್ಥಿಗಳು ವರ್ಷವಿಡೀತರಗತಿ ಬೋಧನೆಯಲ್ಲಿನಿರತರಾಗಿರುವುದರಿಂದತಮ್ಮಲ್ಲಿರುವ ಪ್ರತಿಭೆಯನ್ನು ಪ್ರದರ್ಶಿಸುವ ವೇದಿಕೆ ಇದಾಗಿದೆ. ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಕಾರಣವಾಗುವಚಟುವಟಿಕೆಗಳು ಆರೋಗ್ಯಕರ ಸಂಯೋಜನೆಯಾಗಿದೆ ಶಾಲೆಗಳು ಸಾಮಾನ್ಯವಾಗಿ ಶೈಕ್ಷಣಿಕ ಮತ್ತು ಸಂಬಂಧಿತ ಚಟುವಟಿಕೆಗಳೊಂದಿಗೆ ಸಂಬಂಧಹೊಂದಿವೆ. ಈ ಚಟುವಟಿಕೆಗಳು ಅಗತ್ಯವಾಗಿ ಶೈಕ್ಷಣಿಕವಾಗಿರುವುದಿಲ್ಲಆದರೆ ವಿದ್ಯಾರ್ಥಿಗಳಿಗೆ ಕಲಿಕೆಯಅನುಭವವನ್ನು ನೀಡುವಲ್ಲಿ ಮಹತ್ವದ ಪಾತ್ರವಹಿಸುತ್ತವೆ, ಹಾಗೂ ವ್ಯಕ್ತಿತ್ವರೂಪಿಸುವಲ್ಲಿ ಸಹಕಾರಿಯಾಗುತ್ತದೆಎಂದು ಮಾತನಾಡಿದರು. ಮಕ್ಕಳ ಸೃಜನಾತ್ಮಕ ಮತ್ತುಕ್ರೀಯಾತ್ಮಕ ಸ್ಪರ್ಧೆಯನ್ನುಎಸ್.ಆರ್.ಎಸ್. ಆಡಳಿತ ಮಂಡಳಿ ಶ್ಲಾಘಿಸಿದ್ದಾರೆ. ಕಾರ್ಯಕ್ರಮದಲ್ಲಿ ಸಹಪಠ್ಯೇತರ ಚಟುವಟಿಗಳ ಕೋ-ಆರ್ಡಿನೇಟರ್‌ಗಳಾದ ಸುನೀಲ್ ಭಟ್ ಹಾಗೂ ಲುಬ್ನಾಕೌಸರ್‌ಎಲ್ಲಾ ಹಂತದ ಶೈಕ್ಷಣಿಕ ಸಂಯೋಜಕರು, ಬೋಧಕ ಮತ್ತು ಬೋಧಕೇತರ ವರ್ಗ ಉಪಸ್ಥಿತರಿದ್ದರು.